# Moog Inc. Policy on Anti Bribery
## Companywide

| Section | English | Translation |
|---|---|---|
| Title | **Moog Inc. Policy on Anti Bribery** | **MOOG Inc. ಲಂಚ ವಿರೋಧಿ ನೀತಿ** |
| Sub-title | Applies to All Sites — Companywide | ಸಂಸ್ಥೆಯಾದ್ಯಂತ - ಎಲ್ಲ ಸೈಟ್ ಗಳಿಗೂ ಅನ್ವಯಿಸುತ್ತದೆ |
| **0.0** | **BACKGROUND** | **ಹಿನ್ನೆಲೆ** |
| | Although our ***Moog Statement of Business Ethics*** broadly addresses this topic, the Business Ethics Committee over the past year has considered and vetted the benefits of having stand-alone policy statements for important topics related to business ethics and principled conduct by Moog employees. Having stand-alone policy statements, which are consistent with the general commitment set forth in the ***Moog Statement of Business Ethics***, provide the following advantages: | ಈ ವಿಷಯದಲ್ಲಿ ನಮ್ಮ ವ್ಯಾವಹಾರಿಕ ಮೌಲ್ಯಗಳ ನೀತಿ ಸಂಹಿತೆಯು ಸಮಗ್ರವಾಗಿ ಪರಿಹಾರಗಳನ್ನು ನೀಡುತ್ತದೆಯಾದರೂ, ವ್ಯಾವಹಾರಿಕ ನೀತಿ ಸಮಿತಿಯು ಬಹು ಮುಖ್ಯ  ವಿಷಯಗಳಾದ ವ್ಯಾವಹಾರಿಕ ನೀತಿಗಳು ಮತ್ತು ತತ್ವಬದ್ಧ ನಡವಳಿಕೆಗಳಿಗಾಗಿ ನಮ್ಮದೇ ಆದ ಪ್ರತ್ಯೇಕ ಹಾಗೂ ಅನನ್ಯ ನೀತಿಸಂಹಿತೆಯನ್ನು ಹೊಂದುವುದರಿಂದುಂಟಾಗುವ ಲಾಭಗಳ  ಬಗ್ಗೆ ನಮ್ಮ ಉದ್ಯೋಗಿಗಳಿಂದ  ಕಳೆದ ವರ್ಷದ ಅವಧಿಯಲ್ಲಿ ಪರಿಗಣಿಸಿದೆ ಮತ್ತು ಪರಿಶೀಲಿಸಿದೆ. **MOOG ವ್ಯಾವಹಾರಿಕ ಮೌಲ್ಯಗಳ ಸಂಹಿತೆಯಲ್ಲಿ** ತಿಳಿಸಲಾದ, ಸಾಮಾನ್ಯ ಬದ್ಧತೆಗಳಿಂದ ಸ್ಥಿರವಾಗಿರುವ ನಮ್ಮದೇ ಆದ ಪ್ರತ್ಯೇಕ ಹಾಗೂ ಅನನ್ಯ ನೀತಿಸಂಹಿತೆಗಳನ್ನು ಹೊಂದಿದಲ್ಲಿ, ಅದು ಈ ಕೆಳಕಂಡ ಅನುಕೂಲಗಳನ್ನು ನೀಡುತ್ತದೆ: |
| **1.** | Allows for more robust guidance on what to do and what not to do when confronted with these issues; | ಇಂತಹ ಸಮಸ್ಯೆಗಳು ಎದುರಾದಾಗ ಏನು ಮಾಡಬೇಕು ಮತ್ತು ಏನು ಮಾಡಬಾರದು ಎಂಬ ಬಗ್ಗೆ ಸ್ಥಿರವಾದ ಮಾರ್ಗದರ್ಶನವನ್ನು ನೀಡುತ್ತದೆ; |
| **2.** | Increases the profile and importance of compliance; | ಅಗತ್ಯ ಪಾಲನೆಗಳ ಚಿತ್ರಣ ಮತ್ತು ಪ್ರಾಮುಖ್ಯತೆಗಳನ್ನು ಹೆಚ್ಚಿಸುತ್ತದೆ; |
| **3.** | Is more in-line with what government regulators expect to see in terms of documentation; | ಸರ್ಕಾರಿ ನಿಯಂತ್ರಕರು ದಾಖಲಾತಿ ಪರಿಭಾಷೆಯಲ್ಲಿ ಏನು ಬಯಸುವರೋ ಅದಕ್ಕೆ ಬಹುತೇಕ ಪೂರಕವಾಗಿರುತ್ತದೆ; |
| **4.** | Facilitates our taking environmental, social, and governance (ESG) score credits on these topics by confirming that we have a specific policy and providing a summary (not the full policy) on our website. | ಈ ಕುರಿತಾಗಿ ನಾವು ನಿರ್ದಿಷ್ಟ ನೀತಿಯನ್ನು ಹೊಂದಿದ್ದು, ಮತ್ತು ಅದರ ಸಾರಾಂಶವನ್ನು (ಪೂರ್ಣ ನೀತಿಯಲ್ಲ) ನಮ್ಮ ವೆಬ್ ಸೈಟ್ ನಲ್ಲಿ ನೀಡುವ ಮೂಲಕ ಈ ವಿಷಯಗಳಲ್ಲಿ ನೈಸರ್ಗಿಕ, ಸಾಮಾಜಿಕ, ಮತ್ತು ಆಡಳಿತಾತ್ಮಕವಾದ (ESG) ನಮ್ಮ  ಅಂಕ ಗಳಿಕೆಯನ್ನು ಸುಗಮಗೊಳಿಸುತ್ತದೆ. |
| **1.0** | **OUR PRINCIPLES** | **ನಮ್ಮ ತತ್ವಗಳು** |

# Moog Inc. Policy on Anti Bribery
## Companywide

| Section | English | Translation |
|---|---|---|
| | Integrity is a crucial component of our business. Moog, along with our subsidiaries and affiliates, is committed to ethical business practices and to obeying both the spirit and the letter of the law in every country in which we do business. This baseline commitment is integral to the tenets of our Culture & Values and our Statement of Business Ethics. | ಸಮಗ್ರತೆ ನಮ್ಮ ವ್ಯವಹಾರದ ನಿರ್ಣಾಯಕ ಅಂಶ. ನೈತಿಕ ವ್ಯಾವಹಾರಿಕ ಪದ್ಧತಿಗಳನ್ನು ನಡೆಸಲು ಮತ್ತು ನಾವು ವ್ಯವಹಾರ ನಡೆಸುವ ಎಲ್ಲ ದೇಶಗಳಲ್ಲಿ ಅಲ್ಲಿನ ಕಾನೂನಿನ ಅಂತರಾರ್ಥ ಹಾಗೂ ನೈಜಾರ್ಥ ಇವೆರಡನ್ನೂ ಪಾಲಿಸಲು MOOG, ನಮ್ಮ ಆಶ್ರಿತ ಹಾಗೂ ಅಂಗ ಸಂಸ್ಥೆಗಳೂ ಸೇರಿದಂತೆ ಬದ್ಧವಾಗಿದೆ. ಈ ಮೂಲ ಬದ್ಧತೆ ನಮ್ಮ ಸಂಸ್ಕೃತಿ ಮತ್ತು ಮೌಲ್ಯಗಳು ಹಾಗೂ ನಮ್ಮ ವ್ಯಾವಹಾರಿಕ ನೀತಿ ಸಂಹಿತೆಗಳ ಸಿದ್ಧಾಂತದ ಅವಿಭಾಜ್ಯ ಅಂಗಗಳು. |
| **2.0** | **DEFINITIONS** | **ವಿವರಣೆಗಳು** |
| | The following words and phrases have the meanings expressed below in the context of this policy, in addition to their ordinary usage meanings: | ಈ ಕೆಳಗಿನ ಪದಗಳು ಹಾಗೂ ನುಡಿಗಟ್ಟುಗಳು ತಮ್ಮ ಸಾಮಾನ್ಯ ಬಳಕೆಯ ಅರ್ಥಗಳೂ ಸೇರಿದಂತೆ, ಈ ನೀತಿಗನುಗುಣವಾಗಿ ಕೆಳಗೆ ವಿವರಿಸಿದಂತೆ ಅರ್ಥವನ್ನು ಹೊಂದಿವೆ. |
| **2.1** | **Anything of Value** - Includes, but is not limited to, cash, cash equivalents (such as gift cards, kickbacks, or discounts), benefits or favors, entertainment, gifts, hospitality, meals, travel, charitable contributions, political contributions, or employment opportunities. There is no minimum value for something to be considered "of value". | **ಯಾವುದೇ ಬೆಲೆಬಾಳುವ ಪದಾರ್ಥ** – ಯಾವುದೇ ಬೆಲೆಬಾಳುವ ಪದಾರ್ಥ - ಇವನ್ನು ಒಳಗೊಂಡಿದೆ - ಆದರೆ ಇಷ್ಟಕ್ಕೇ ಸೀಮಿತವಾಗಿಲ್ಲ, ನಗದು ಹಣ, ನಗದು ಹಣಕ್ಕೆ ಸರಿಸಮಾನವಾಗುವ (ಬಹುಮಾನದ ಕಾರ್ಡ್ ಗಳು, ಕಿಕ್ ಬ್ಯಾಕ್ ಗಳು, ಅಥವಾ ರಿಯಾಯ್ತಿಗಳು), ಪ್ರಯೋಜನಗಳು ಅಥವಾ ಉಪಕಾರ, ಮನರಂಜನೆ, ಬಹುಮಾನಗಳು, ಆತಿಥ್ಯ, ಊಟ, ಪ್ರಯಾಣ, ದಾನಗಳು, ರಾಜಕೀಯ ಕೊಡುಗೆಗಳು, ಅಥವಾ ನೌಕರಿ ಅವಕಾಶಗಳು. ಯಾವುದೇ ವಸ್ತುವನ್ನು "ಬೆಲೆಯುಳ್ಳದ್ದು" ಎಂದು ಪರಿಗಣಿಸಲು ಅಲ್ಲಿ ಯಾವುದೇ ಕನಿಷ್ಠ ಮಿತಿ ಇರುವುದಿಲ್ಲ. |
| **2.2** | **Bribery (or Bribe)** - Giving, offering, promising, requesting, or authorizing the giving of anything of value, directly or indirectly, to any person or entity to induce a person to act, or refrain from acting, in relation to the performance of their duties, in order to obtain or retain any business advantage or benefit. However, customary business courtesies given or received consistent with our policy on Business Gifts and Gratuities and not provided for the purpose of improperly inducing action or inaction to obtain a business advantage are not bribes. | **ಲಂಚಕೋರತನ (ಅಥವಾ ಲಂಚ)** - ಕೊಡುಗೆ, ಉಪಕಾರ, ಭರವಸೆ, ಬೇಡಿಕೆ, ಅಥವಾ ನೇರವಾಗಿ ಅಥವಾ ಪರೋಕ್ಷವಾಗಿ ಯಾವುದೇ ವ್ಯಕ್ತಿಗೆ ಅಥವಾ ಘಟಕಕ್ಕೆ ಯಾವುದೇ ಬೆಲೆಬಾಳುವ ಪದಾರ್ಥಗಳ ಕೊಡುಗೆಯ ಅಧಿಕೃತಗೊಳಿಸುವಿಕೆ, ಪರವಾಗಿ ಕಾರ್ಯವೆಸಗಲು ಓರ್ವ ವ್ಯಕ್ತಿಯ ಪ್ರೇರೇಪಣೆ, ಅಥವಾ ಕಾರ್ಯನಿರ್ವಹಿಸದಂತೆ ದೂರ ಸರಿಸುವುದು, ತಮ್ಮ ಕರ್ತವ್ಯ ನಿರ್ವಹಣೆಗೆ ಸಂಬಂಧಿಸಿದಂತೆ, ವ್ಯಾವಹಾರಿಕ ಲಾಭ ಅಥವಾ ಅನುಕೂಲತೆಗಳನ್ನು ಪಡೆದುಕೊಳ್ಳುವುದು, ಅಥವಾ ಉಳಿಸಿಕೊಳ್ಳುವುದು ಲಂಚ ಅಥವಾ ಲಂಚಕೋರತನವಾಗುತ್ತದೆ. ಆದರೆ, ನಮ್ಮ ವ್ಯಾವಹಾರಿಕ ಕೊಡುಗೆಗಳು ಮತ್ತು ಪ್ರೋತ್ಸಾಹಕ ಧನಗಳ ನೀತಿಗೆ ಹೊಂದುವಂತೆ ಸಾಂಪ್ರದಾಯಕ |

| Section | English | Translation |
|---|---|---|
| | | ವ್ಯಾವಹಾರಿಕ  ಸೌಜನ್ಯಗಳ ನೀಡಿಕೆ ಅಥವಾ ಸ್ವೀಕಾರ  ಮತ್ತು  ಸಮರ್ಪಕವಾಗಿ ಪ್ರೇರಣೆಯನ್ನು ಒದಗಿಸದ ಕಾರಣದಿಂದಾಗಿ ಕೊಡದಿರುವುದು, ಅಥವಾ ವ್ಯಾವಹಾರಿಕ ಪ್ರಯೋಜನ ಪಡೆದುಕೊಳ್ಳುವಲ್ಲಿ ನಿಷ್ಕ್ರಿಯತೆ, ಇವು ಲಂಚಗಳಾಗುವುದಿಲ್ಲ. |
| 2.3 | **Facilitating Payments** - Payments made to public officials to encourage them to expedite a routine or common governmental task that the official is otherwise required to undertake even if the payment were not made, such as issuing permits or licenses.  This is distinct from payments expressly authorized to be made to a government agency (not an individual) to expedite processing. | **ಅನುಕೂಲಕ್ಕಾಗಿ ಹಣ ಪಾವತಿ:** ಸಾರ್ವಜನಿಕ ಅಧಿಕಾರಿಗಳಿಗೆ ಅವರು ತಮ್ಮ ದಿನನಿತ್ಯದ ಅಥವಾ ಸಾಮಾನ್ಯ ಸರ್ಕಾರಿ ಕಾರ್ಯಗಳನ್ನು ಚುರುಕಾಗಿ ಮಾಡಿಕೊಡುವುದಕ್ಕಾಗಿ ಪ್ರೋತ್ಸಾಹಿಸಲು ಪಾವತಿಸಲಾಗುವ ಹಣ, ಇಂತಹ ಕೆಲಸಗಳನ್ನು ಈ ಅಧಿಕಾರಿ ಹಣ ಪಾವತಿಸದಿದ್ದರೂ ಸಹ ಮಾಡಲೇಬೇಕಾದ ಕರ್ತವ್ಯವಾಗಿದ್ದು, ಉದಾಹರಣೆಗೆ - ಅನುಮತಿಗಳು ಅಥವಾ ಪರವಾನಗಿಗಳ ನೀಡಿಕೆ. ಪ್ರಕ್ರಿಯೆಗಳನ್ನು ಚುರುಕಾಗಿ ಮಾಡಲು ಸರ್ಕಾರಿ ಸಂಸ್ಥೆಗೆ (ಯಾವೊಬ್ಬ ವ್ಯಕ್ತಿಗಲ್ಲ) ಸ್ಪಷ್ಟವಾಗಿ ಮಾಡಲೇಬೇಕಾದ ಅಧಿಕೃತ ಹಣ ಪಾವತಿಗೆ ಇದು ಹೊರತಾಗಿದ್ದು, ವಿಶಿಷ್ಟವಾಗಿರುತ್ತದೆ. |
| 2.4 | **Gift** - Includes any tangible object of any kind, regardless of value.  Acceptable reasonable and appropriate business gifts that will not be considered a violation of this policy are discussed in our separate policy on Business Gifts and Gratuities. | **ಉಡುಗೊರೆ** - ಮೌಲ್ಯವನ್ನು ಲೆಕ್ಕಿಸದೇ, ಯಾವುದೇ ಸ್ಪಷ್ಟ ವಸ್ತು ಯಾವುದೇ ತರಹದ್ದು. ನಮ್ಮ ಈ ನೀತಿಯ ಉಲ್ಲಂಘನೆ ಎಂದು ಪರಿಗಣಿಸಲಾಗದಂತೆ ಸ್ವೀಕರಿಸಬಹುದಾದ ಸಮಂಜಸ ಹಾಗೂ ಸೂಕ್ತ ಉಡುಗೊರೆಗಳ ಬಗ್ಗೆ ವ್ಯಾವಹಾರಿಕ ಉಡುಗೊರೆಗಳು ಮತ್ತು ಪ್ರೋತ್ಸಾಹ ಧನ ಎಂಬ ನಮ್ಮ ಪ್ರತ್ಯೇಕವಾದ ನೀತಿಯಲ್ಲಿ ಚರ್ಚಿಸಲಾಗಿದೆ. |
| 2.5 | **Hospitality** - Meals, lodging, or any event or form of entertainment (including sporting events, parties, plays, and receptions). | **ಆತಿಥ್ಯ:** ಭೋಜನ, ವಸತಿ, ಅಥವಾ ಯಾವುದೇ ಕಾರ್ಯಕ್ರಮ ಅಥವಾ ಮನರಂಜನೆಯ ಪ್ರಾಕಾರ (ಕ್ರೀಡಾ ಚಟುವಟಿಕೆಗಳು, ವಿನೋದ ಕೂಟಗಳು, ಪ್ರಹಸನ ಅಥವಾ ನಾಟಕಗಳು, ಮತ್ತು ಸ್ವಾಗತ ಹೂಟಗಳೂ ಸೇರಿದಂತೆ) |
| 2.6 | **Public Official** - A government official, whether elected or appointed; an officer or employee of a government agency or state-owned or state-controlled entity; a person performing a public service on behalf of a government or government agency; a political party or party official; a candidate for political office; any person acting in an official capacity; or an officer or employee of a public international organization. | **ಸಾರ್ವಜನಿಕ ಅಧಿಕಾರಿ:** ಚುನಾಯಿತ ಅಥವಾ ನೇಮಕಗೊಂಡ, ಓರ್ವ ಸರ್ಕಾರೀ ಅಧಿಕಾರಿ, ಸರ್ಕಾರಿ ಪ್ರತಿನಿಧಿತ ಸಂಸ್ಥೆ ಅಥವಾ ರಾಜ್ಯ-ಸರ್ಕಾರಿ ಪ್ರಭುತ್ವದ ಅಥವಾ ನಿಯಂತ್ರಿತ ಸಂಸ್ಥೆಯ ಓರ್ವ ಅಧಿಕಾರಿ ಅಥವಾ ಸರ್ಕಾರಿ ನೌಕರ, ಸರ್ಕಾರದ ಪರವಾಗಿ ಅಥವಾ ಸರ್ಕಾರಿ ಪ್ರತಿನಿಧಿತ್ವ ಸಂಸ್ಥೆಯ ಪರವಾಗಿ ಒಂದು ಸಾರ್ವಜನಿಕ ಕರ್ತವ್ಯನಿರತನಾದ ವ್ಯಕ್ತಿ; ಒಂದು ರಾಜಕೀಯ ಪಕ್ಷ ಅಥವಾ ಪಕ್ಷದ ಅಧಿಕಾರಿ; ಒಂದು ರಾಜಕೀಯ ಕಚೇರಿಯ ಅಭ್ಯರ್ಥಿ; ಅಧಿಕೃತ ಅಧಿಕಾರದಲ್ಲಿ ಕರ್ತವ್ಯನಿರತನಾದ ಯಾವುದೇ ವ್ಯಕ್ತಿ; ಅಥವಾ ಓರ್ವ ಅಧಿಕಾರಿ ಅಥವಾ ನೌಕರ, ಒಂದು ಅಂತಾರಾಷ್ಟ್ರೀಯ ಸಾರ್ವಜನಿಕ ಸಂಸ್ಥೆಯ ಅಧಿಕಾರಿ ಅಥವಾ ನೌಕರ. |

| Section | English | Translation |
|---|---|---|
| 2.7 | **Third Party** - Any person or entity who acts on behalf of or represents Moog, including but not limited to sales agents or representatives, distributors, consultants, lobbyists, transportation or logistics providers, customs clearing agents, or any person or entity retained to represent Moog in a matter before a public official, government agency, or in tax or legal matters. | **ಮೂರನೇ ವ್ಯಕ್ತಿ:** MOOG ಸಂಸ್ಥೆಯ ಪರವಾಗಿ ತೊಡಗಿರುವ ಅಥವಾ ಸಂಸ್ಥೆಯನ್ನು ಪ್ರತಿನಿಧಿಸುವ ಯಾವುದೇ ವ್ಯಕ್ತಿ ಅಥವಾ ಅಸ್ತಿತ್ವ, ಮಾರಾಟ ಪ್ರತಿನಿಧಿಗಳು ಅಥವಾ ಪ್ರತಿನಿಧಿಗಳು, ವಿತರಕರು, ಸಮಾಲೋಚಕರು, ಪ್ರೇರಕರು, ಸಾರಿಗೆ ಅಥವಾ ಸಾಗಾಣಿಕೆ ಸೇವೆ ನೀಡುವವರು, ಆಮದು-ರಫ್ತು ತೆರವುಗೊಳಿಸುವ ಪ್ರತಿನಿಧಿ, ಸಾರ್ವಜನಿಕ ಅಧಿಕಾರಿಯ ಮುಂದೆ, ಸರ್ಕಾರಿ ಪ್ರತಿನಿಧಿತ ಸಂಸ್ಥೆ, ಅಥವಾ ತೆರಿಗೆ ಅಥವಾ ಕಾನೂನು ಸಂಬಂಧಿತ ವಿಚಾರದಲ್ಲಿ MOOG ಸಂಸ್ಥೆಯನ್ನು ಪ್ರತಿನಿಧಿಸಲು ಉಳಿಸಿಕೊಳ್ಳಲಾದ ಯಾವುದೇ ವ್ಯಕ್ತಿ ಅಥವಾ ಸಂಸ್ಥೆ. |
| 2.8 | **Travel -** All forms of transportation, including ground transit and air travel. | **ಪ್ರವಾಸ:** ಭೂ ಪ್ರಯಾಣ, ವಿಮಾನ ಯಾನ ಸೇರಿದಂತೆ - ಎಲ್ಲ ವಿಧದ ಪ್ರಯಾಣಗಳು. |
| **3.0** | **REFERENCE DOCUMENTS** | **ಪರಾಮರ್ಶೆಗಾಗಿ ದಾಖಲೆಗಳು** |
| Ref BMDL-12-3285 | Moog Policy on Business Gifts and Gratuities | ವ್ಯಾವಹಾರಿಕ ಉಡುಗೊರೆಗಳು ಹಾಗೂ ಪ್ರೋತ್ಸಾಹ ಧನ ಕುರಿತ MOOG ನೀತಿ |
| Ref BMDL-12-3285 | Statement of Business Ethics | ವ್ಯಾವಹಾರಿಕ ನೀತಿ ಸಂಹಿತೆ |
| Ref BMDL-12-1660 | Moog Culture & Philosophy | MOOG ಸಂಸ್ಕೃತಿ ಹಾಗೂ ತತ್ವ |

# Moog Inc. Policy on Anti Bribery
## Companywide

| Section | English | Translation |
|---|---|---|
| **4.0** | **BASIC POLICY** | **ಮೂಲ ನೀತಿ** |
| | Moog prohibits bribery or any other improper payments in business dealings. Moog takes its legal responsibilities to prevent bribery very seriously and expects you to do the same. Where bribery might be a customary business practice in a given country, it is not a justification for violation of this policy. We expect full compliance with its terms from every single employee, whether permanent or temporary. The same expectation applies to employees of our agents and third parties acting on Moog's behalf. | ಲಂಚ ಅಥವಾ ಇನ್ನಿತರ ಯಾವುದೇ ಅಕ್ರಮ ಪಾವತಿಗಳನ್ನು MOOG ನಿಷೇಧಿಸಿದೆ. MOOG ಲಂಚವನ್ನು ತಪ್ಪಿಸಲು ಕಾನೂನಾತ್ಮಕ ಜವಾಬ್ದಾರಿಗಳನ್ನು ಅತ್ಯಂತ ಗಂಭೀರವಾಗಿ ತೆಗೆದುಕೊಂಡಿದ್ದು, ನೀವೂ ಹಾಗೆಯೇ ವರ್ತಿಸಬೇಕೆಂದು ಬಯಸುತ್ತದೆ. ಯಾವುದೇ ಒಂದು ದೇಶದಲ್ಲಿ, ಲಂಚ ಒಂದು ಸಾಂಪ್ರದಾಯಿಕ ವ್ಯಾವಹಾರಿಕ ಪದ್ಧತಿಯಾಗಿದ್ದಲ್ಲಿ, ಈ ನಮ್ಮ ನೀತಿಯ ಉಲ್ಲಂಘನೆಗೆ ಅದು ಸಮರ್ಥನೆಯಾಗುವುದಿಲ್ಲ. ನಾವು ಪ್ರತಿಯೊಬ್ಬ ನೌಕರನಿಂದ, ಈ ನಿಯಮಗಳ ಸಂಪೂರ್ಣ ಪಾಲನೆಯನ್ನು ನಿರೀಕ್ಷಿಸುತ್ತೇವೆ, ಅವನು ಶಾಶ್ವತ ನೌಕರನಾಗಲೀ ಅಥವಾ ಅರೆಕಾಲಿಕ ನೌಕರನಾಗಿರಲಿ. ನಮ್ಮ ಪ್ರತಿನಿಧಿಗಳ ನೌಕರರಿಗೂ ಮತ್ತು MOOG ನ ಪರವಾಗಿ ತೊಡಗಿಕೊಂಡ ಮೂರನೇ ವ್ಯಕ್ತಿಗಳಿಗೂ ಸಹ ಇದೇ ನಿರೀಕ್ಷೆಗಳು ಅನ್ವಯಿಸುತ್ತವೆ. |
| **5.0** | **REQUIRED CONDUCT AND ACTIONS** | **ಅಗತ್ಯವಾದ ನಡವಳಿಕೆ ಮತ್ತು ಕ್ರಿಯೆ** |
| **5.1** | **Bribery and Facilitating Payments** | **ಲಂಚ ಮತ್ತು ಅನುಕೂಲಕ್ಕಾಗಿ ಮಾಡುವ ಹಣ ಪಾವತಿ** |
| | Moog, our employees, and our third parties are prohibited from offering or giving a bribe, whether directly or indirectly, to any person or entity. Moog, our employees, and our third parties are prohibited from requesting or receiving a bribe, directly or indirectly, from any person or entity. All demands for bribes or kickbacks must be expressly rejected. Moog, our employees, | MOOG , ನಮ್ಮ ನೌಕರರು, ಮತ್ತು ನಮ್ಮ ಮೂರನೇ ವ್ಯಕ್ತಿಗಳು, ಯಾವುದೇ ವ್ಯಕ್ತಿಗೆ ಅಥವಾ ಸಂಸ್ಥೆಗೆ ನೇರವಾಗಿ ಅಥವಾ ಪರೋಕ್ಷವಾಗಿ ಆಗಲೀ ಲಂಚ ಕೊಡುವುದು ನಿಷೇಧಿಸಲಾಗಿದೆ. MOOG , ನಮ್ಮ ನೌಕರರು, ಮತ್ತು ನಮ್ಮ ಮೂರನೇ ವ್ಯಕ್ತಿಗಳು ಯಾವುದೇ ವ್ಯಕ್ತಿಯಿಂದ ಅಥವಾ ಸಂಸ್ಥೆಯಿಂದಾಗಲೀ ನೇರವಾಗಿ ಅಥವಾ ಪರೋಕ್ಷವಾಗಿ ಲಂಚವನ್ನು ಬೇಡುವುದು ಅಥವಾ |

MOOG

# Moog Inc. Policy on Anti Bribery

## Companywide

| Section | English | Translation |
| --- | --- | --- |
| | and our third parties are prohibited from offering or making facilitating payments to public officials. If a Moog employee or third party believes there is a serious threat to a person's health or safety if a payment demand is not met, such payment would not be considered a prohibited bribe. In that situation, the employee or third party should immediately report the incident to the Corporate law department and the payment must be properly recorded as a bribe given under duress in Moog's books and records. Employees and third parties who refuse to pay a bribe will not suffer any penalty, demotion, or other adverse consequence as a result, even if Moog loses business. Employees and third parties are required to promptly report any suspected violations of this anti-bribery policy to Moog's Corporate law department, senior management, or the Moog hotline. No employee or third party will suffer any penalty, demotion or other adverse consequence for reports made in good faith. Reports will be treated confidentially to the extent possible, consistent with the need to conduct a thorough investigation. | ಸ್ವೀಕರಿಸುವುದನ್ನು ನಿಷೇಧಿಸಲಾಗಿದೆ. ಲಂಚ ಅಥವಾ ಕಿಕ್ ಬ್ಯಾಕ್ ಗಳ ಎಲ್ಲ ಆಗ್ರಹಗಳನ್ನು ಸ್ಪಷ್ಟವಾಗಿ ತಿರಸ್ಕರಿಸಲೇಬೇಕು. MOOG , ನಮ್ಮ ನೌಕರರು, ಮತ್ತು ನಮ್ಮ ಮೂರನೇ ವ್ಯಕ್ತಿಗಳು ಸಾರ್ವಜನಿಕ ಅಧಿಕಾರಿಗಳಿಗೆ ಅನುಕೂಲಗಳಿಗಾಗಿ ಹಣ ಪಾವತಿ ಅಥವಾ ಪಾವತಿಯ ಪ್ರಸ್ತಾವನೆ ಮಾಡುವುದನ್ನು ನಿಷೇಧಿಸಲಾಗಿದೆ. ಒಂದು ವೇಳೆ ಹಣ ಪಾವತಿಗಾಗಿ ಮಾಡಲಾದ ಆಗ್ರಹವನ್ನು ಪೂರೈಸದಿದ್ದಲ್ಲಿ, ಓರ್ವ ವ್ಯಕ್ತಿಯ ಆರೋಗ್ಯಕ್ಕೆ ಅಥವಾ ಅವನ ಸುರಕ್ಷತೆಗೆ ಗಂಭೀರವಾದ ಬೆದರಿಕೆ ಇದೆ ಎಂಬ ಬಗ್ಗ MOOG ನ ನೌಕರನಿಗೆ ಅಥವಾ ಮೂರನೇ ವ್ಯಕ್ತಿಗೆ ನಂಬಿಕೆಯಿದ್ದಲ್ಲಿ, ಅಂತಹ ಹಣ ಪಾವತಿಯನ್ನು ನಿಷೇಧಿತ ಲಂಚವೆಂದು ಪರಿಗಣಿಸಲಾಗುವುದಿಲ್ಲ. ಅಂತಹ ಸಂದರ್ಭದಲ್ಲಿ, ನೌಕರ ಅಥವಾ ಮೂರನೇ ವ್ಯಕ್ತಿಯು ಕೂಡಲೇ ಈ ಪ್ರಕರಣವನ್ನು ಕಾರ್ಪೊರೇಟ್ ಕಾನೂನು ಇಲಾಖೆಗೆ ವರದಿ ಮಾಡಬೇಕು ಮತ್ತು ಹಣ ಪಾವತಿಯನ್ನು ದೌರ್ಬಲ್ಯದಡಿಯಲ್ಲಿ ನೀಡಲಾದ ಲಂಚ ಎಂದು MOOG ನ ದಾಖಲೆಗಳಲ್ಲಿ ದಾಖಲಿಸಬೇಕು. ಲಂಚ ಪಾವತಿಸಲು ನಿರಾಕರಿಸಿದ ಕಾರಣದಿಂದಾಗಿ MOOG ಒಂದು ವೇಳೆ ಆ ವ್ಯವಹಾರವನ್ನು ಕಳೆದುಕೊಂಡರೂ ಕೂಡ, ನೌಕರರಾಗಲೀ ಅಥವಾ ಮೂರನೇ ವ್ಯಕ್ತಿಗಳಾಗಲೀ ಯಾವುದೇ ದಂಡ, ಹಿಂಬಡ್ತಿ, ಅಥವಾ ಇತರೆ ಪ್ರತಿಕೂಲ ಪರಿಣಾಮಗಳನ್ನು ಅನುಭವಿಸುವುದಿಲ್ಲ. MOOG ನ ನೌಕರರು ಮತ್ತು ಮೂರನೇ ವ್ಯಕ್ತಿಗಳು ಯಾವುದೇ ಲಂಚ ವಿರೋಧಿ ನೀತಿಯ ಉಲ್ಲಂಘನೆಯ ಶಂಕೆಯಿದ್ದಲ್ಲಿ, ಅದನ್ನು ಪ್ರಾಮಾಣಿಕವಾಗಿ MOOG ನ ಕಾರ್ಪೊರೇಟ್ ಕಾನೂನು ಇಲಾಖೆಗೆ, ಹಿರಿಯ ಆಡಳಿತ ಮಂಡಳಿಗೆ, ಅಥವಾ MOOG ಹಾಟ್ ಲೈನ್ ಗೆ ವರದಿ ಮಾಡಬೇಕು. ಯಾವುದೇ ನೌಕರ ಅಥವಾ ಮೂರನೇ ವ್ಯಕ್ತಿಯು ಒಳ್ಳೆಯ ನಂಬಿಕೆಯಿಂದ ಮಾಡಿದ ಇಂತಹ ವರದಿಗಳಿಗಾಗಿ ಯಾವುದೇ ದಂಡ, ಹಿಂಬಡ್ತಿ ಅಥವಾ ಇತರೆ ಪ್ರತಿಕೂಲ ಪರಿಣಾಮಗಳನ್ನು ಅನುಭವಿಸುವುದಿಲ್ಲ. ಸಮಗ್ರವಾದ ತನಿಖೆ ಮಾಡಬೇಕೆಂಬ ಸ್ಥಿರ ಅಗತ್ಯತೆಯೊಂದಿಗೆ, ವರದಿಗಳನ್ನು ಸಾಧ್ಯವಾದ ಮಟ್ಟಿಗೆ ಅತ್ಯಂತ ಗೌಪ್ಯವಾಗಿ ಪರಿಗಣಿಸಲಾಗುವುದು. |

MOOG

# Moog Inc. Policy on Anti Bribery
## Companywide

| Section | English | Translation |
|---|---|---|
| 5.2 | **Charitable Contributions** | **ಧಾರ್ಮಿಕ ಕೊಡುಗೆಗಳು** |
| | No charitable donations may be given, offered, promised, or authorized without proper authorization. If a donation is authorized, it must fully comply with all applicable laws and be properly and accurately reflected in Moog's books and records. | ಸಮರ್ಪಕ ದೃಢೀಕರಣವಿಲ್ಲದೆ, ಧಾರ್ಮಿಕ ದೇಣಿಗೆಗಳನ್ನು ಕೊಡುವಂತಿಲ್ಲ, ಪ್ರಸ್ತಾಪಿಸುವಂತಿಲ್ಲ, ಆಶ್ವಾಸನೆ ನೀಡುವಂತಿಲ್ಲ ಅಥವಾ ಅಧಿಕೃತಗೊಳಿಸುವಂತಿಲ್ಲ. ಒಂದು ವೇಳೆ ದೇಣಿಗೆಯನ್ನು ಅಧಿಕೃತಗೊಂಡಿದ್ದಲ್ಲಿ, ಅದು ಸಂಪೂರ್ಣವಾಗಿ ಎಲ್ಲ ಅನ್ವಯಿತ ಕಾನೂನುಗಳ ಪಾಲನೆಗಳಿಗೊಳಪಟ್ಟಿದ್ದು, ಹಾಗೂ ಸಮರ್ಪಕವಾಗಿ ಮತ್ತು ನಿಖರವಾಗಿ MOOG ನ ದಾಖಲೆಗಳು ಮತ್ತು ಪುಸ್ತಕಗಳಲ್ಲಿ ಪ್ರತಿಫಲಿಸಿತಗೊಂಡಿರಬೇಕು. |
| 5.3 | **Gifts, Hospitality and Travel** | **ಉಡುಗೊರೆಗಳು, ಅನುಕೂಲತೆಗಳು ಮತ್ತು ಪ್ರವಾಸ** |
| | Moog, our employees, and our third parties shall not offer or receive gifts, hospitality, or travel whenever these could affect the outcome of business transactions or other matters Moog is involved in, or where doing so would be in violation of the laws of the recipient's country. All gifts, hospitality, and travel must be made consistent with Moog's policies regarding gifts, hospitality, and travel, and be properly and accurately recorded in Moog's books, records, and accounts. Moog, our employees, and our third parties shall not offer or receive gifts, hospitality, or travel that are not reasonable and legitimate business expenditures. Any hospitality or travel offered or provided to public officials must be directly related to the promotion or demonstration of our products or services, or directly related to the performance of a contract with a government, government agency, or state-owned or -controlled entity. Any expenses that do not meet these criteria will not be reimbursed or otherwise paid for by Moog. In order to qualify for reimbursement, proposed gift, hospitality, and travel expenses must be explicitly detailed in the request (i.e., broken down by names and positions of government officials, | ಯಾವುದೇ ಸಂದರ್ಭದಲ್ಲಿ, ಉದ್ಯಮದ ವ್ಯವಹಾರಗಳಿಗೆ, ಅಥವಾ MOOG ಭಾಗಿಯಾಗಿರುವ ಇತರೆ ವಿಷಯಗಳಲ್ಲಿ ಫಲಿತಾಂಶದ ಮೇಲೆ ಪರಿಣಾಮ ಬೀರಬಲ್ಲದೋ, ಅಥವಾ ಎಲ್ಲಿ ಹೀಗೆ ಮಾಡುವುದರಿಂದ ಗ್ರಾಹಕ ದೇಶಗಳಲ್ಲಿನ ಕಾನೂನುಗಳ ಉಲ್ಲಂಘನೆಯಾಗುವುದೋ, ಅಲ್ಲಿ MOOG, ನಮ್ಮ ನೌಕರರು, ಮತ್ತು ನಮ್ಮ ಮೂರನೇ ವ್ಯಕ್ತಿಗಳು ಉಡುಗೊರೆಗಳು, ಆತಿಥ್ಯ, ಅಥವಾ ಪ್ರವಾಸಗಳನ್ನು ಪ್ರಸ್ತಾಪಿಸಬಾರದು ಅಥವಾ ಸ್ವೀಕರಿಸಕೂಡದು. ಎಲ್ಲ ಉಡುಗೊರೆಗಳು, ಆತಿಥ್ಯಗಳು, ಮತ್ತು ಪ್ರವಾಸಗಳು MOOG ನ ಉಡುಗೊರೆಗಳು, ಆತಿಥ್ಯ, ಮತ್ತು ಪ್ರವಾಸದ ನೀತಿಗಳಿಗೆ ಸ್ಥಿರವಾಗಿ ಅನುಸಾರವಾಗಿರುವಂತೆ ಮಾಡಬೇಕು, ಮತ್ತು ಸಮರ್ಪಕವಾಗಿ ಹಾಗೂ ನಿಖರವಾಗಿ MOOG ನ ಪುಸ್ತಕಗಳಲ್ಲಿ, ದಾಖಲೆಗಳಲ್ಲಿ, ಮತ್ತು ಖಾತೆಗಳಲ್ಲಿ ದಾಖಲಾಗಿರಬೇಕು. MOOG, ನಮ್ಮ ನೌಕರರು, ಮತ್ತು ನಮ್ಮ ಮೂರನೇ ವ್ಯಕ್ತಿಗಳು ಸಕಾರಾಣವಿಲ್ಲದ ಮತ್ತುಕಾನೂನುಬದ್ಧವಲ್ಲದ ವ್ಯಾವಹಾರಿಕ ಖರ್ಚು-ವೆಚ್ಚಗಳಾದ ಉಡುಗೊರೆಗಳನ್ನು, ಆತಿಥ್ಯವನ್ನು, ಅಥವಾ ಪ್ರವಾಸಗಳನ್ನು ಪ್ರಸ್ತಾಪಿಸಬಾರದು ಅಥವಾ ಸ್ವೀಕರಿಸಬಾರದು. ಸಾರ್ವಜನಿಕ ಅಧಿಕಾರಿಗಳಿಗೆ ಪ್ರಸ್ತಾಪಿಸಲಾದ ಅಥವಾ ನೀಡಲಾದ ಯಾವುದೇ ಆತಿಥ್ಯ ಅಥವಾ ಪ್ರವಾಸಗಳು ನಮ್ಮ ಉತ್ಪಾದನೆಗಳು ಮತ್ತು ಸೇವೆಗಳ ಪ್ರಚಾರಕ್ಕೆ ಅಥವಾ ಪ್ರದರ್ಶನಕ್ಕೆ ನೇರವಾಗಿ ಸಂಬಂಧಿಸಿರಬೇಕು, ಅಥವಾ ಸರ್ಕಾರದ ಜೊತೆ ಹೊಂದಿದ ಒಪ್ಪಂದಗಳಿಗೆ ನೇರವಾಗಿ ಸಂಬಂಧಿಸಿರಬೇಕು. ಈ ಮಾನದಂಡಗಳನ್ನು |

| Section | English | Translation |
|---|---|---|
| | dates and places of travel, and the amount and type of specific expenses). Moog reserves the right to deny, in whole or in part, any expenses related to the travel of a government or political party official (including officers and employees of government-owned or government-controlled enterprises) for any reason. Employees who authorize the reimbursement or payment of expenses covered by this section without following the above procedures will be subject to disciplinary action, including termination of employment. | ಪಾಲಿಸದ ಯಾವುದೇ ಖರ್ಚು-ವೆಚ್ಚಗಳನ್ನು ಮರುಪಾವತಿಸುವುದಿಲ್ಲ ಅಥವಾ ಇನ್ನಾವುದೇ ರೀತಿಯಲ್ಲಿ MOOG ನಿಂದ ಭರಿಸಲಾಗುವುದಿಲ್ಲ. ಪ್ರಸ್ತಾಪಿತ ಉಡುಗೊರೆಗಳು, ಆತಿಥ್ಯ, ಮತ್ತು ಪ್ರವಾಸಗಳು ಮರುಪಾವತಿಗೆ ಅರ್ಹತೆ ಹೊಂದಬೇಕಿದ್ದಲ್ಲಿ, ಆ ಮನವಿಯಲ್ಲಿ ಸ್ಪಷ್ಟವಾಗಿ  ವಿವರವಾಗಿರಬೇಕು (ಅಂದರೆ., ಸರ್ಕಾರಿ ಅಧಿಕಾರಿಗಳ ಹೆಸರು ಮತ್ತು ಸ್ಥಾನ-ಮಾನಗಳು, ದಿನಾಂಕಗಳು ಮತ್ತು ಪ್ರವಾಸ ಮಾಡಲಾದ ಸ್ಥಳಗಳು, ಮತ್ತು ಮೊತ್ತ, ಮತ್ತು ಖರ್ಚು-ವೆಚ್ಚದ  ಬಗ್ಗೆ ನಿಖರ ಮಾಹಿತಿ). ಯಾವುದೇ ಕಾರಣದಿಂದ ಸರ್ಕಾರ ಅಥವಾ ರಾಜಕೀಯ ಪಕ್ಷದ ಅಧಿಕಾರಿಯ (ಸರ್ಕಾರೀ-ಸ್ವಾಮ್ಯದ ಅಥವಾ ಸರ್ಕಾರೀ-ನಿಯಂತ್ರಿತ ಸಂಸ್ಥೆಗಳ ಅಧಿಕಾರಿಗಳು ಮತ್ತು ನೌಕರರು ಸೇರಿದಂತೆ) ಪ್ರವಾಸಕ್ಕೆ ಸಂಬಂಧಿಸಿದ ಯಾವುದೇ ಖರ್ಚು-ವೆಚ್ಚಗಳನ್ನು ಸಂಪೂರ್ಣವಾಗಿ ಅಥವಾ ಭಾಗಶ:  ಭರಿಸುವಿಕೆಯನ್ನು ನಿರಾಕರಿಸುವ ಹಕ್ಕನ್ನು MOOG ಕಾಯ್ದಿರಿಸಿಕೊಂಡಿದೆ. ಈ ವಿಭಾಗವನ್ನು ಒಳಗೊಂಡ ಖರ್ಚು-ವೆಚ್ಚಗಳ ಮರುಪಾವತಿ ಅಥವಾ ಪಾವತಿಗಳನ್ನು ಮೇಲೆ ತಿಳಿಸಲಾದ ವಿಧಾನಗಳನ್ನು ಪಾಲಿಸದೇ ಅಧಿಕೃತಗೊಳಿಸಿದ ನೌಕರರು, ಅವರ ಉದ್ಯೋಗದ ರದ್ದತಿಯೂ ಸೇರಿದಂತೆ ಶಿಸ್ತಿನ ಕ್ರಮಗಳಿಗೆ ಒಳಗಾಗುವರು. |
| **5.4** | **Conflicts of Interest** | **ಆಸಕ್ತಿಯ ಸಂಘರ್ಷಗಳು** |
| | Moog, our employees, and our third parties shall avoid any relationship or activity that might impair, or reasonably appear to impair, their ability to render objective and appropriate business decisions in the performance of their jobs. | MOOG, ನಮ್ಮ ನೌಕರರು, ಮತ್ತು ನಮ್ಮ ಮೂರನೇ ವ್ಯಕ್ತಿಗಳು ತಮ್ಮ ನಿರೂಪಣಾ ಸಾಮರ್ಥ್ಯ, ಮತ್ತು ತಮ್ಮ ಕಾರ್ಯನಿರ್ವಹಣೆಯಲ್ಲಿ ಸೂಕ್ತ ವ್ಯಾವಹಾರಿಕ ನಿರ್ಧಾರಗಳನ್ನು ನಿರೂಪಿಸುವಲ್ಲಿ ತಮ್ಮನ್ನು ದುರ್ಬಲಗೊಳಿಸುವಂತಹ, ಅಥವಾ ಸಕಾರಣವಾಗಿ ದುರ್ಬಲಗೊಳಿಸಬಹುದೆಂದು ಕಂಡುಬರುವಂತಹ , ಯಾವುದೇ ಅಂತಹ ಸಂಬಂಧಗಳನ್ನು ತಪ್ಪಿಸಬೇಕು. |
| **5.5** | **Books and Records** | **ಪುಸ್ತಕಗಳು ಮತ್ತು ದಾಖಲಾತಿಗಳು** |
| | Moog is committed to maintaining complete and accurate books, records, and accounts. All transactions, including payments, reimbursement requests, expenditures, expense reports, invoices, vouchers, gifts, and business entertainment | MOOG ಸಂಪೂರ್ಣ ಮತ್ತು ನಿಖರವಾದ ಪುಸ್ತಕಗಳು, ದಾಖಲಾತಿಗಳನ್ನು ಮತ್ತು ಲೆಖ್ಖ-ಪತ್ರಗಳ ಖಾತೆಗಳನ್ನು ಕಾಪಾಡಿಕೊಳ್ಳಲು ಬದ್ಧವಾಗಿದೆ. ಹಣ ಪಾವತಿಗಳು, ಮರುಪಾವತಿ ಮನವಿಗಳು, ಖರ್ಚುಗಳು, ಖರ್ಚಿನ ವಿವರಗಳು, ಸರಕು ಬೆಲೆಪಟ್ಟಿ, ರಸೀತಿಗಳು, ಉಡುಗೊರೆಗಳು, ಮತ್ತು ವ್ಯಾವಹಾರಿಕ |

| Section | English | Translation |
|---|---|---|
| | must be properly and accurately entered into Moog's books, records, and accounts in a timely manner, in detail, and with supporting documentation. Failure to properly record an expense is a per se violation of the U.S. Foreign Corrupt Practices Act, for which there is strict liability. Therefore, a payment, while not intended to be a bribe, if not properly recorded, may still be treated as a violation of the law. | ಮನರಂಜನೆಗಳು ಸೇರಿದಂತೆ ಎಲ್ಲ ವ್ಯವಹಾರಗಳನ್ನು ಸಮರ್ಪಕವಾಗಿ ಮತ್ತು ನಿಖರವಾಗಿ MOOG ನ ಪುಸ್ತಕಗಳು, ದಾಖಲೆಗಳು ಮತ್ತು ಲೆಖ್ಖ-ಪತ್ರಗಳ ಖಾತೆಗಳಲ್ಲಿ ಸಮಯೋಚಿತವಾಗಿ ವಿವರವಾಗಿ ಮತ್ತು ಎಲ್ಲ ಪೂರಕ ದಾಖಲಾತಿಗಳೊಂದಿಗೆ ದಾಖಲಿಸಲಾಗುವುದು. ಖರ್ಚು-ವೆಚ್ಚಗಳ ಸಮರ್ಪಕ ದಾಖಲಾತಿಯ ವೈಫಲ್ಯವು ಅಮೆರಿಕಾದ ವಿದೇಶಿ ಭ್ರಷ್ಟ ಅಭ್ಯಾಸಗಳ ನೀತಿಯ (U.S. Foreign Corrupt Practices Act) ಉಲ್ಲಂಘನೆಯಾಗಿದ್ದು, ಇದಕ್ಕೆ ಕಟ್ಟುನಿಟ್ಟಿನ ಬಾಧ್ಯತೆಗಳಿವೆ. ಆದರಿಂದ, ಲಂಚದ ಉದ್ದೇಶವಿಲ್ಲದ, ಒಂದು ಹಣ ಪಾವತಿಯು, ಸಮರ್ಪಕವಾಗಿ ದಾಖಲಾಗದಿದ್ದಲ್ಲಿ, ಕಾನೂನಿನ ಉಲ್ಲಂಘನೆಯೆಂದೇ ಪರಿಗಣಿಸಲ್ಪಡುತ್ತದೆ. |
| **5.6** | **Training** | **ತರಬೇತಿಗಳು** |
| | Officers, directors, and employees are expected to participate in anti-bribery training on a periodic basis. Managers and supervisors subject to completing periodic financial reporting questionnaires must certify that they have read this policy and that they are acting and will continue to act in compliance with this policy. | ಅಧಿಕಾರಿಗಳು, ನಿರ್ದೇಶಕರುಗಳು, ಮತ್ತು ನೌಕರರುಗಳು ನಿಯತಕಾಲಿಕ ಆಧಾರದ ಲಂಚ-ವಿರೋಧಿ ತರಬೇತಿಯಲ್ಲಿ ಪಾಲ್ಗೊಳ್ಳಬೇಕಿರುವುದು ಅವಶ್ಯವಾಗಿದೆ. ವ್ಯವಸ್ಥಾಪಕರುಗಳು ಮತ್ತು ಸೂಪರ್ ವೈಸರ್ ಗಳು ನಿಯತಕಾಲಿಕ ಹಣಕಾಸು ವರದಿಮಾಡಿಕೊಳ್ಳಬೇಕಿರುವ ಪ್ರಶ್ನಾವಳಿಗಳನ್ನು ಪೂರ್ಣಗೊಳಿಸಬೇಕಿದ್ದು, ತಾವು ಈ ನೀತಿಯನ್ನು ಓದಿದ್ದೇವೆ ಮತ್ತು ತಾವು ಈ ನೀತಿಗೆ ಬದ್ಧರಾಗಿ ನಡೆಯುತ್ತಿದ್ದೇವೆ ಮತ್ತು ಮುಂದೆಯೂ ನಡೆದುಕೊಳ್ಳುತ್ತೇವೆ ಎಂದು ಪ್ರಮಾಣ ಮಾಡಬೇಕಿದೆ. |
| **5.7** | **Consequences of Non-Compliance** | **ಅಪಾಲನೆಯ ಪರಿಣಾಮಗಳು** |
| | Under a variety of anti-bribery laws applicable to our world-wide operations, bribery is not only a civil violation, it is a criminal offense punishable by the imposition of substantial | ನಮ್ಮ ವಿಶ್ವದಾದ್ಯಂತದ ಕಾರ್ಯಾಚರಣೆಗಳಿಗೆ ಅನ್ವಯಿಸುವ ವಿವಿಧ ಲಂಚ-ವಿರೋಧಿ ಕಾನೂನುಗಳಡಿ, ಲಂಚಕೋರತನವು ಕೇವಲ ಸಾಮಾಜಿಕ ಉಲ್ಲಂಘನೆ ಮಾತ್ರವಲ್ಲದೆ, ಅದು ಶಿಕ್ಷಾರ್ಹ ಕ್ರಿಮಿನಲ್ ಅಪರಾಧವಾಗಿದ್ದು, ಗಣನೀಯ |

| Section | English | Translation |
|---|---|---|
| | fines on Moog and the loss of licensing and contracting privileges. Any person involved in the bribery faces the real possibility of termination of employment, substantial fines, and imprisonment. | ದಂಡಗಳನ್ನು MOOG ಭರಿಸಬೇಕಾಗುವುದು ಮತ್ತು ಪರವಾನಗಿ ಹಾಗೂ ಒಪ್ಪಂದದ ಸವಲತ್ತುಗಳು ರದ್ದಾಗುತ್ತವೆ. ಲಂಚಕೋರತನದಲ್ಲಿ ತೊಡಗುವ ಯಾವುದೇ ವ್ಯಕ್ತಿಯು ನೌಕರಿಯಿಂದ ಪದಚ್ಯುತಿ, ಗಣನೀಯ ದಂಡಗಳು ಮತ್ತು ಸೆರೆವಾಸದ ನೈಜ ಸಾಧ್ಯತೆಗಳನ್ನು ಎದುರಿಸಬೇಕಾಗುವುದು. |
| Note | Moog employees should reference the Business Management Document Library for the most current version of this policy. | MOOG ನೌಕರರುಗಳು ಈ ನೀತಿಯ ಇತ್ತೀಚಿನ ಆವೃತ್ತಿಗಾಗಿ ವ್ಯಾವಹಾರಿಕ ದಾಖಲಾತಿಯ ಸಂಗ್ರಹವನ್ನು ಪರಾಮರ್ಶಿಸಬೇಕು. |
| | ## Internal Moog Document ID is BMDL-12-3284 | ## MOOG ಆಂತರಿಕ ದಾಖಲೆಯ ಐಡಿ BMDL-12-3284 |